# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 12.01.2011**

## *ಕಸ ವಿಲೇವಾರಿಗಾಗಿ ಸಾರ್ವಜನಿಕರ / ಸಂಘ ಸಂಸ್ಥೆಗಳ ಸಹಕಾರ ಅಗತ್ಯ : ಪಾಲಿಕೆ ಆಯುಕ್ತರು*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಸಾಹಸ್, ಕ್ರೈಸ್ಟ್ ಯೂನಿವರ್ಸಿಟಿ, ಸಿ.ಹೆಚ್.ಎಫ್. ಅಂತರಾಷ್ಟ್ರೀಯ ಸಂಸ್ಥೆಯ ಸಹಯೋಗದಲ್ಲಿ ಈಜೀಪುರದಲ್ಲಿ ಸ್ಥಾಪಿಸಿದ ತ್ಯಾಜ್ಯ ವಿಲೇವಾರಿ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಆಯುಕ್ತರು, ಬೆಂಗಳೂರು ನಗರದಲ್ಲಿ ಪ್ರತಿನಿತ್ಯ ಸುಮಾರು 3000 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಅದನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸಾರ್ವಜನಿಕರ / ಸಂಘ ಸಂಸ್ಥೆಗಳ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ಈ ಎಲ್ಲಾ ಸಂಸ್ಥೆಗಳ ಸಹಕಾರದಿಂದ ವಾರ್ಡ್-148 ಈಜೀಪುರದಲ್ಲಿ ಸಂಗ್ರಹಣೆಯಾಗುವ ಕಸವನ್ನು ವಿಲೇವಾರಿ ಮಾಡಲು ಈ ಘಟಕವನ್ನು ಸ್ಥಾಪಿಸಲಾಗಿದೆ. ಸುಮಾರು 1000 ಮನೆಗಳಿಂದ ಸಂಗ್ರಹಣೆಯಾಗುವ 2 ಟನ್‌ಗಳಷ್ಟು ಕಸವನ್ನು ಈ ಘಟಕದಲ್ಲಿ ವಿಂಗಡಿಸಿ recycling, reuse ಗಾಗಿ ಉಪಯೋಗಿಸಲಾಗುತ್ತಿದೆ. ವಿಂಗಡಿಸಿದ ಕಸವನ್ನು ಮಾರಾಟ ಮಾಡಿ ಆದಾಯ ಸಂಗ್ರಹಿಸಲಾಗುತ್ತಿದೆ. ಹಸಿ ಕಸದಿಂದ ಗೊಬ್ಬರ ತಯಾರಿಸಿ ಮಾರಲಾಗುತ್ತಿದೆ. ಇದರಿಂದ ಕೇವಲ 5 ರಿಂದ 10% ರಷ್ಟು ಮಾತ್ರ ತ್ಯಾಜ್ಯ ಡಂಪಿಂಗ್ ಯಾರ್ಡ್‌ಗೆ ಕಳುಹಿಸಲಾಗುತ್ತಿದೆ. ಕಸವನ್ನು ಸಂಪೂರ್ಣವಾಗಿ ಸಂಪನ್ಮೂಲವನ್ನಾಗಿ ಬಳಕೆ ಮಾಡಬಹುದು. ಸಂಗ್ರಹಿಸಿದ ಕಸದಲ್ಲಿ ಶೇಕಡಾ 40 ರಷ್ಟು ಒಣ ಕಸ ಕೂಡಿದ್ದು, ಅದನ್ನು ಮರುಬಳಕೆ ಮಾಡಲಾಗುವುದು ಎಂದು ತಿಳಿಸಿದರು.

ನಗರದಲ್ಲಿ ಉತ್ಪತ್ತಿಯಾದ ಕಸವನ್ನು ಹೊರ ವಲಯದ ಡಂಪಿಂಗ್ ಯಾರ್ಡ್‌ನಲ್ಲಿ ಹಾಕಿ ಅದರ ಸುತ್ತಮುತ್ತಲು ವಾಸಿಸುವ ಜನರ ಜೀವನವನ್ನು ಅಪಾಯಕ್ಕೆ ಸಿಲುಕಿಸುವ ಕೆಲಸವನ್ನು ಮಾಡುತ್ತಿದ್ದೇವೆ. ನಮ್ಮ ಕಸದಿಂದ ಅವರೇಕೆ ಕಷ್ಟ ಅನುಭವಿಸಬೇಕು. ನಗರದಲ್ಲಿ ಉತ್ಪತಿಯಾದ ಕಸವನ್ನು ನಗರದಲ್ಲೇ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಇದರಿಂದ ನಾಗರಿಕರಿಗೂ ಮತ್ತು ಪರಿಸರಕ್ಕೂ ಒಳ್ಳೆಯದು.

ನಗರದಲ್ಲಿ ಉತ್ಪತಿಯಾಗುವ ಕಸದಲ್ಲಿ ಹೆಚ್ಚಿನ ಪ್ರಮಾಣ ಪ್ಲಾಸ್ಟಿಕ್ ಕೂಡಿರುತ್ತದೆ. ನಗರದ ನಾಗರಿಕರು ತಿಳಿದವರು, ನಾವು ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ನಿಲ್ಲಿಸಬೇಕು. ಇದರಿಂದ ಪರಿಸರದ ಮೇಲೆ ಆಗುವ ಅಪಾಯ ತಪ್ಪಿಸಬಹುದು.

ಪಾಲಿಕೆ ಪ್ರತಿ ವರ್ಷ ಕಸ ವಿಲೇವಾರಿಗಾಗಿ ಸುಮಾರು 200 ಕೋಟಿಗಳಷ್ಟು ಹಣ ಖರ್ಚು ಮಾಡುತ್ತದೆ. ನಗರದ ಎಲ್ಲಾ ವಾರ್ಡ್‌ಗಳಲ್ಲಿ ಇಂತಹ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸುವುದರಿಂದ ಸಾಗಾಣಿಕೆ, ಪ್ರಕ್ರಿಯೆ ಖರ್ಚನ್ನು ಉಳಿಸಬಹುದು. ಇದರಿಂದ ಪಾಲಿಕೆಗೆ ಉಳಿತಾಯವಾಗಲಿದೆ. ಆದ್ದರಿಂದ ನಾಗರಿಕ ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತು ಪ್ಲಾಸ್ಟಿಕ್ ಬಳಸುವಾಗ, ಕಸ ವಿಲೇವಾರಿ ಮಾಡುವಾಗ ಅತ್ಯಂತ ಗಮನಹರಿಸಿ ಅದನ್ನು ಬೀದಿ ಮೇಲೆ ಹಾಕದೇ ತಳ್ಳುವ ಗಾಡಿಗೆ ಕೊಟ್ಟು ನಗರ ಸ್ವಚ್ಛತೆ ಕಾಪಾಡಲು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಸ್ಥಳೀಯ ಶಾಸಕರಾದ ಶ್ರೀ ರಾಮಲಿಂಗಾ ರೆಡ್ಡಿ ರವರು ಮಾತನಾಡಿ, ಕಸ ವಿಲೇವಾರಿಗಾಗಿ ಪಾಲಿಕೆ ಸಾಕಷ್ಟು ಪ್ರಯತ್ನ ನಡೆಸಿದೆ. ಈ ಇಂತಹ ಘಟಕಗಳನ್ನು ನನ್ನ ಕ್ಷೇತ್ರದ ವಾರ್ಡ್‌ಗಳಲ್ಲಿ ಸ್ಥಾಪಿಸಬೇಕು. ನನ್ನ ಸಂಪೂರ್ಣ ಸಹಕಾರವಿದೆ. ಇದರಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಇದೇ ಸಂದರ್ಭದಲ್ಲಿ ನಾಗರಿಕರು ಕೂಡಾ ತಮ್ಮ ಜವಾಬ್ದಾರಿ ಅರಿಯಬೇಕು ಎಂದು ತಿಳಿಸಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 12.01.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಇಂದು ನಗರದ ಹೋಟೆಲ್ ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ, ಹೋಟೆಲ್‌ಗಳಲ್ಲಿ ಉತ್ಪತ್ತಿಯಾದ ಕಸವನ್ನು ಹತ್ತಿರದ ಸ್ಥಳಗಳಲ್ಲಿ ಸಂಗ್ರಹಿಸಿ, ಅದನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವಂತೆ ಕ್ರಮ ಕೈಗೊಳ್ಳಲು ಮನವಿ ಮಾಡಿದರು.

ನಗರದ ಹೋಟೆಲ್ ಉದ್ದಿಮೆದಾರರಿಗೆ ಪರವಾನಿಗೆ ಪಡೆಯಲು ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಸಂಘದ ಪದಾಧಿಕಾರಿಗಳು ಆಯುಕ್ತರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಪಾಲಿಕೆಯ ಆಯುಕ್ತರು ಮಾತನಾಡಿ, ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಸ್ಪಂಧಿಸುವುದಾಗಿ ತಿಳಿಸಿದರು. ಹೋಟೆಲ್ ಉದ್ದಿಮೆದಾರರು ವ್ಯಾಪಾರ ಮಾಡಿ, ಕಸ ಉತ್ಪತ್ತಿ ಮಾಡುತ್ತಾರೆ. ಆದರೆ ಕಸ ವಿಲೇವಾರಿ ನಾವು ಮಾಡಬೇಕು. ಇದು ಯಾವ ನ್ಯಾಯ? ಇದಕ್ಕೆ ಯಾರು ಜವಾಬ್ದಾರರು? ವಸೂಲಿ ಮಾಡಲಾಗುವ ಪರವಾನಿಗೆ ಶುಲ್ಕದಿಂದ ಹೋಟೆಲ್‌ಗಳಲ್ಲಿ ಉತ್ಪತ್ತಿಯಾಗುವ ಎಲಾ ಕಸವನ್ನು ವಿಲೇವಾರಿ ಮಾಡಲು ಸಾಧ್ಯವಿಲ್ಲ. ಪಾಲಿಕೆ ಅದಕ್ಕಿಂತ ಎಷ್ಟೋಪಟ್ಟು ಹಣವನ್ನು ವೆಚ್ಚ ಮಾಡಬೇಕಾಗುತ್ತದೆ.

ಉತ್ಪಾದಿಸಿದ ಕಸ ವಿಲೇವಾರಿಯ ಹೊಣೆ ನಿಮ್ಮ ಮೇಲೆಯೂ ಕೂಡಾ ಇದೆ. ಪರಿಸರ ಮತ್ತು ಸಮಾಜದ ಬಗ್ಗೆ ಕಾಳಜಿ ಇರಬೇಕು. ಹೋಟೆಲ್‌ಗಳು ಇರುವಂತಹ ರಸ್ತೆಗಳನ್ನು ಗಮನಿಸಿದರೆ, ಅಲ್ಲಿ ಸ್ವಚ್ಛತೆ ಅಷ್ಟೊಂದು ಇರುವುದಿಲ್ಲ. ಆದ್ದರಿಂದ ಹೋಟೆಲ್ ಮಾಲೀಕರುಗಳು ಕಸ ವಿಲೇವಾರಿ ಮತ್ತು ಸುತ್ತಮುತ್ತಲಿನ ಪರಿಸರದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ನಾವೆಲ್ಲರೂ ಅಭಿವೃದ್ಧಿಯಾಗುತ್ತಿರುವುದು ನಗರದಿಂದಲೇ. ಏಕೆ ನಾವು ನಗರ ಸ್ವಚ್ಛತೆ ಬಗ್ಗೆ ಕಾಳಜಿ ವಹಿಸಬಾರದು? ನಗರ ಸ್ವಚ್ಛವಾಗಿದ್ದರೆ ಹೋಟೆಲ್‌ಗಳಿಗೂ ವ್ಯಾಪಾರ ಹೆಚ್ಚುತ್ತದೆ. ತಾವೆಲ್ಲರೂ ಇದನ್ನು ಗಮನಿಸಬೇಕು. ಮುಂಬರುವ ದಿನಗಳಲ್ಲಿ ಈ ಬಗ್ಗೆ ಕಸ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ಸೂಚಿಸಿದರು.

ಹೋಟೆಲ್ ಸಂಘದ ಪದಾಧಿಕಾರಿಗಳು ಸಲ್ಲಿಸಿದ ಮನವಿಗೆ, ಪಾಲಿಕೆಯ ಆಯುಕ್ತರು ಈ ಕೆಳಕಂಡಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

- ಹೊಸದಾಗಿ ಹೋಟೆಲ್ ಉದ್ದಿಮೆ ಪ್ರಾರಂಭ ಮಾಡುವವರಿಗೆ ದಂಡ ವಿಧಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಂತಹವರಿಗೆ ಯಾವುದೇ ರೀತಿಯ ತೊಂದರೆ ಇಲ್ಲದೆ ಪರವಾನಿಗೆ ನೀಡಲಾಗುವುದು. ಯಾರಾದರು ಈಗಾಗಲೇ ಉದ್ದಿಮೆ ಪ್ರಾರಂಭಿಸಿ, ನಂತರ ಪರವಾನಿಗೆ ಕೇಳಿದ್ದಲ್ಲಿ ಅಂತಹವರ ಮೇಲೆ ಮಾತ್ರ ದಂಡ ವಿಧಿಸಲಾಗುವುದು.
- ವಾಣಿಜ್ಯ ಕಟ್ಟಡಗಳಲ್ಲಿ ಹೋಟೆಲ್ ಉದ್ದಿಮೆ ಪ್ರಾರಂಭಿಸುವಾಗ ನೆರೆಹೊರೆಯವರ ಅನುಮತಿ ಪಡೆಯಬೇಕಾದಂತಹ ಅವಶ್ಯಕತೆ ಇರುವುದಿಲ್ಲ. ವಸತಿ ಪ್ರದೇಶವಾಗಿದ್ದಲ್ಲಿ ಮಾತ್ರ ಅನ್ವಯಿಸುತ್ತದೆ. ಈ ಸಂಬಂಧ ಕೂಡಾ ಸ್ಪಷ್ಟವಾಗಿ ಸುತ್ತೋಲೆಯನ್ನು ಹೊರಡಿಸಲಾಗುವುದೆಂದು ತಿಳಿಸಿದರು.
- ಅನೇಕ ವಸತಿ ಪ್ರದೇಶಗಳು ಕ್ರಮೇಣವಾಗಿ ವಾಣಿಜ್ಯ ಪ್ರದೇಶಗಳಾಗಿ ಪರಿವರ್ತನೆಗೊಂಡಿರುತ್ತದೆ. ಇಂತಹ ಪ್ರದೇಶಗಳಲ್ಲಿ ಉದ್ದಿಮೆ ಪರವಾನಿಗೆ ಪಡೆಯುವಾಗ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಜಂಟಿ ಆಯುಕ್ತರಿಂದ ಸ್ಥಳ ಪರಿಶೀಲನೆ ಮಾಡಿ, ವಸತಿ ಪ್ರದೇಶವನ್ನು ವಾಣಿಜ್ಯ ಪ್ರದೇಶವನ್ನಾಗಿ ಪರಿವರ್ತಿಸುವ ಸಂಬಂಧ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆಯಲ್ಲಿ ಮಂಡಿಸಿ, ಮುಂದಿನ ಕ್ರಮಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸಲಾಗುವುದು.
- ಹೋಟೆಲ್ ಉದ್ದಿಮೆ ಪರವಾನಿಗೆಗಾಗಿ ಸಂಗ್ರಹಿಸಲಾಗುವ ಶುಲ್ಕವನ್ನು ಕಡಿಮೆ ಮಾಡಲು ಸಂಘದ ಪದಾಧಿಕಾರಿಗಳು ಕೇಳಿದ್ದಕ್ಕಾಗಿ ಆಯುಕ್ತರು ಉತ್ತರ ನೀಡಿ, ಸರ್ಕಾರದ ತೀರ್ಮಾನಕ್ಕೆ ಬಿಟ್ಟಿರುವ ವಿಷಯವಾಗಿರುತ್ತದೆ ಎಂದು ತಿಳಿಸಿದರು.

ಹೋಟೆಲ್ ಸಂಘದ ಪದಾಧಿಕಾರಿಗಳು ಸಾರ್ವಜನಿಕರಲ್ಲಿ ಮತ್ತು ಹೋಟೆಲ್ ಮಾಲೀಕರಲ್ಲಿ ನೈರ್ಮಲ್ಯ, ಪರಿಸರ ಮಾಲಿನ್ಯ, ಸ್ವಚ್ಛತೆ, ಮುಂತಾದ ವಿಷಯಗಳ ಕುರಿತು ಜಾಗೃತಿ ಮೂಡಿಸಲು ಕರಪತ್ರಗಳನ್ನು ಹೊರಡಿಸಿರುವುದಾಗಿ ತಿಳಿಸಿ, ಅದರ ಪ್ರತಿಗಳನ್ನು ಆಯುಕ್ತರಿಗೆ ನೀಡಿದರು. ಆಯುಕ್ತರು ಮೆಚ್ಚುಗೆ ವ್ಯಕ್ತಪಡಿಸಿ, ಇಂತಹ ಕಾರ್ಯಕ್ರಮಗಳನ್ನು ಮುಂದುವರೆಸಿ ಸಾರ್ವಜನಿಕರ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷರಾದ ಶ್ರೀ ಕೆ.ಎನ್. ವಾಸುದೇವ ಅಡಿಗ, ಉಪಾಧ್ಯಕ್ಷರಾದ ಶ್ರೀ ಹೆಚ್.ಬಿ. ರಾಜೀವ್ ಶೆಟ್ಟಿ, ಶ್ರೀ ಜಿ.ಕೆ. ಸೋಮಯಾಜಿ, ಪ್ರಧಾನ ಕಾರ್ಯದರ್ಶಿಯಾದ ಶ್ರೀ ಪಿ.ಸಿ. ರಾವ್ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ:** 12.01.2011

ಇಂದು ಬೆಳಿಗ್ಗೆ ಸುಖದೇವ್ ಮತ್ತು ಕೈಕೆಯಿ ದಂಪತಿಗಳ ಒಂದೂವರೆ ವರ್ಷದ ಮಗು ಪ್ರಶಾಂತ್‌ನನ್ನು ಬೀದಿ ನಾಯಿಗಳು ಕಚ್ಚಿ ತಿಂದಿರುವ ಘಟನೆ ಬಾಗಲೂರು ಬಳಿ ನಡೆದಿದ್ದು, ಈ ಬಗ್ಗೆ ಪಾಲಿಕೆ ಆಯುಕ್ತರು ವಿಷಾಧ ವ್ಯಕ್ತಪಡಿಸಿದ್ದಾರೆ.

ಬಾಗಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಘಟನೆ ಜರುಗಿದ್ದು, ಇದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಸಾರ್ವಜನಿಕರ ಹಾಗೂ ಮಾಧ್ಯಮದವರ ಅವಗಾಹನೆಗೆ ತರಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**